**ಭಾಗ ೩– 2 ವಿವರ**

ಕರ್ನಾಟಕ ಸರ್ಕಾರ

**ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ ಮಂಗಳೂರು**

## 2011–12 ನೇ ಸಾಲಿನ ಕ್ರಿಯಾಯೋಜನೆಯ ಆಯವ್ಯಯ ವಿವರ

| ಕ್ರ.ಸ | ಕಾರ್ಯಕ್ರಮದ ಹೆಸರು | ಭೌತಿಕ ಗುರಿ | ಆರ್ಥಿಕ ಗುರಿ (ಲಕ್ಷ ರೂ ಗಳಲ್ಲಿ) | ವಿವರ |
|---|---|---|---|---|
| | **(1)ಸಾಮಾನ್ಯ ಕಾರ್ಯಕ್ರಮಗಳು(9 ಲಕ್ಷ)** | | | |
| 1 | ಕೊಂಕಣಿ ಫೆಲೋಶಿಪ್ ಯೋಜನೆ | 05 | 5.00 | **<u>ಕೊಂಕಣಿ ಫೆಲೋಶಿಫ್–2011</u>** ಈ ಯೋಜನೆಯಲ್ಲಿ 5 ಪ್ರಕಾರಗಳಲ್ಲಿ ಅಂದರೆ ವಿಷಯಗಳನ್ನು ಅಯ್ಕೆ ಮಾಡಿ ಐದು ಸಂಶೋಧಕರನ್ನು ಫೆಲೋಶಿಫ್ ಯೋಜನೆಗಾಗಿ ಅಯ್ಕೆ ಮಾಡಲಾಗಿದೆ. 1. ಚಲನಚಿತ್ರ 2. ಕೊಂಕಣಿ ಜಾನಪದ ಕ್ರೀಢೆಗಳು, 3. ಕೊಂಕಣಿ ಭಾಷೆ ಉಗಮ ಮತ್ತು ಪ್ರಸಾರ ಹಾಗೂ ಇಂದಿನ ಪರಿಸ್ಥಿತಿ. 4. ಕೊಂಕಣಿ ಮತ್ತು ಇತರ ಭಾಷೆಗಳಲ್ಲಿರುವ ಸಾಹಿತ್ಯ ಮತ್ತು ಸಂಸ್ಕೃತಿಯ ಸಾಮರಸ್ಯ 5. ಕನ್ನಡ ಸಾಹಿತ್ಯಕ್ಕೆ ಕೊಂಕಣಿಗರು ನೀಡಿರುವ ಕೊಡುಗೆಗಳು ಈ ಐದು ವಿಷಯದಲ್ಲಿ ಸಂಶೋಧನೆ ಕಾರ್ಯವನ್ನು ನಡೆಸಲು ಈ ಯೋಜನೆ ಹಮ್ಮಿಕೊಳ್ಳಲಾಗಿದೆ. ಈ ಯೋಜನೆಯು ಪೆಬ್ರವರಿ 2011 ರಿಂದ ಪ್ರಾರಂಭ ಮಾಡಲಾಗಿದೆ. ಜನವರಿ 2012 ಕ್ಕೆ ಸಂಶೋಧನೆ ಅಂತ್ಯಗೊಳ್ಳಲಿದೆ. |
| 2 | ಅಕಾಡೆಮಿ ಗೌರವ ಪ್ರಶಸ್ತಿ | 03 | 0.60 | **<u>ಗೌರವ ಪ್ರಶಸ್ತಿ</u>**:2011ನೇ ಸಾಲಿನ ಅಕಾಡೆಮಿಯು ನೀಡುವ ಗೌರವ ಪ್ರಶಸ್ತಿಯಲ್ಲಿ ಮೂರು ಪ್ರಕಾರಗಳ 1. ಕೊಂಕಣಿ ಭಾಷೆ – ಸಾಹಿತ್ಯ, 2. ಕೊಂಕಣಿ ಕಲೆ–ನಾಟಕ/ ಸಂಗೀತ 3. |

| | | | | |
|---|---|---|---|---|
| | | | | ಕೊಂಕಣಿ ಜನಪದ ಕ್ಷೇತ್ರಗಳಲ್ಲಿ ಅನನ್ಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿ ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಈ ಪ್ರಶಸ್ತಿಯಲ್ಲಿ ಗೌರವಧನ ರೂ. 10,000–00, ಶಾಲು, ಗಂಧದಹಾರ, ಸ್ಮರಣಿಕೆ, ಪ್ರಮಾಣ ಪತ್ರ ಮತ್ತು ಫಲ ತಾಂಬೂಲ ನೀಡಿ ಗೌರವಿಸಲಾಗುವುದು. ಈ ಸಂದರ್ಭದ ಲ್ಲಿ ಆಯ್ದ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು. |
| 3 | ಅಕಾಡೆಮಿ ಪುಸ್ತಕ ಪ್ರಶಸ್ತಿ | 03 | 0.30 | **.ಪುಸ್ತಕ ಪುರಸ್ಕಾರ:** 2011ನೇ ಅಕಾಡೆಮಿಯ ಪುಸ್ತಕ ಪುರಸ್ಕಾರಕ್ಕೆ 1.ಕನ್ನಡ–ಕೊಂಕಣಿ ಯಾ ಕೊಂಕಣಿ–ಕನ್ನಡ ಭಾಷಾಂತರ, 2. ಕವನ, 3. ಕಥೆ/ ಕಾದಂಬರಿ/ಅಧ್ಯಯನ ಗ್ರಂಥ/ಲೇಖನ ಈ ಮೂರು ಪ್ರಕಾರಗಳನ್ನು ಬಹುಮಾನಕ್ಕೆ ಆಯ್ಕೆಮಾಡಲಾಗಿದೆ. ಈ ಪುರಸ್ಕಾರವು ಗೌರವಧನ ರೂ. 5,000–00, ಶಾಲು, ಗಂಧದಹಾರ, ಸ್ಮರಣಿಕೆ, ಪ್ರಮಾಣ ಪತ್ರವನ್ನು ಒಳಗೊಂಡಿರುತ್ತದೆ. ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಗಣ್ಯರು ಪ್ರಶಸ್ತಿ ಪುಸ್ತಕ ಈ ಸಂದರ್ಭದಲ್ಲಿ ಆಯ್ದ ಕಲಾ ತಂಡಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು. |
| 4 | ಅಧ್ಯಕ್ಷರ ಜರೂರು ಕಾರ್ಯಕ್ರಮ | – | 0.20 | ಅಧ್ಯಕ್ಷರು ಅಕಾಡೆಮಿ ಸಮಿತಿಯೊಂದಿಗೆ ಸಮಾಲೋಚಿಸದೇ ನಡೆಸಬೇಕಾದ ಯಾವುದೇ ಜರೂರು ಕಾರ್ಯಕ್ರಮಗಳಿಗಾಗಿ ವರ್ಷಕ್ಕೆ ಗರಿಷ್ಠ ರೂ. 20,000–00 ಗಳಿಗೊಳಪಟ್ಟು ಪ್ರತೀ ಸಂದರ್ಭದಲ್ಲೂ ರೂ 5,000–00 ಮಿತಿಯವರೆಗೆ ಖರ್ಚು ಮಾಡುವರೇ |

| | | | | |
|---|---|---|---|---|
| | | | | ಹಂಚಿಕೆ ಮಾಡಲಾಗಿದೆ. |
| 5 | ಅಕಾಡೆಮಿ ಕಾರ್ಯಕ್ರಮ ಆಯೋಜನೆ ವೆಚ್ಚಗಳು | – | 0.90 | ಅಕಾಡೆಮಿಯ ಸಭೆ ಸಮಾರಂಭಗಳಿಗೆ, ಮತ್ತು ಕಾರ್ಯಕ್ರಮಗಳ ಪೂರ್ವಭಾವಿ ಸಿದ್ದತೆಗಳಿಗಾಗಿ ಏರ್ಪಡಿಸಿರುವ ಸಬೆಗಳಿಗೆ ಭಾಗವಹಿಸುವ ಅಧ್ಯಕ್ಷರ, ಸದಸ್ಯರ, ಅತಿಥಿ ಸದಸ್ಯರ, ಅಧಿಕಾರಿ, ಸಿಬ್ಬಂದಿಗಳ ಪ್ರಯಾಣವೆಚ್ಚಗಳನ್ನು ಹಾಗೂ ಸಭಾವೆಚ್ಚಗಳನ್ನು ಭರಿಸುವುದು. |

| | | | | |
|---|---|---|---|---|
| 6 | ಕಾರ್ಯಕ್ರಮಗಳ ಬಾಬ್ತು ಒಟ್ಟು ಕಛೇರಿ ವೆಚ್ಚಗಳು | – | 2.00 | ಅಕಾಡೆಮಿಯು ನಡೆಸುವ ಯಾವುದೇ ಕಾರ್ಯಕ್ರಮಗಳ ಕಚೇರಿ ಖರ್ಚುಗಳಿಗೆ ಸಂಬಂಧಿಸಿದಂತೆ ವೆಚ್ಚಗಳನ್ನು ಭರಿಸುವುದು: ಕಾರ್ಯಕ್ರಮಗಳ ಬಾಬ್ತು ಬರುವ ಎಲ್ಲಾ ಜೆರಾಕ್ಸ್, ಕೊರಿಯಾರ್, ಅಂಚೆಚೀಟಿ, ದೂರವಾಣಿ,ಸಾದಿಲ್ವಾರು ಖರೀದಿಗಳು ಇತ್ಯಾದಿಗಳನ್ನು ಭರಿಸುವುದು. |

## (2)ಕೊಂಕಣಿ ಭಾಷಾ ಶಿಕ್ಷಣ ಮತ್ತು ಸಂಶೋಧನೆ(14 ಲಕ್ಷ)

| | | | | |
|---|---|---|---|---|
| 7 | ಶಾಲಾಕಾಲೇಜುಗಳಲ್ಲಿ ಕೊಂಕಣಿ ಮಾನ್ಯತಾ ದಿನಾಚರಣೆ | 30 | 2.50 | ಶಿರಸಿ,ಕಾರವಾರ,ಉಡುಪಿ,ಮಂಗಳೂರು,ಪುತ್ತೂರು ನಗರದ ತಲಾ ಒಂದೊಂದು ಶಾಲೆಗಳಲ್ಲಿ ರೂ 25000/- ಐದು ಕಾರ್ಯಕ್ರಮಗಳು<br>ಹಾಗೂ ಮೂರು ಜಿಲ್ಲೆಗಳಲ್ಲಿ ಅಂದರೆ ದ.ಕ.-15, ಉಡುಪಿ-05, ಉತ್ತರಕನ್ನಡ-05 ತಲಾ 5000/- ವೆಚ್ಚದಲ್ಲಿ ಒಟ್ಟು 25 ಶಾಲೆಗಳಲ್ಲಿ<br>ಹೀಗೆ ಒಟ್ಟು 30 ಶಿಕ್ಷಣ ಸಂಸ್ಥೆಗಳಲ್ಲಿ ಕೊಂಕಣಿ ಮಾನ್ಯತಾ ದಿನದ ಸಂದೇಶವನ್ನು ಕೊಂಕಣಿ ಜನರಿಗೆ ಮುಟ್ಟಿಸುವ ವ್ಯವಸ್ಥಿತ ಸಭಾ ಕಾರ್ಯಕ್ರಮ, ಪ್ರಚಾರ ಅಭಿಯಾನ ನಡೆಸುವುದು. |
| 8 | ಕೊಂಕಣಿ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಸಾಹಿತ್ಯ, ಲಲಿತಕಲೆ ಸಾಂಸ್ಕೃತಿಕ ಕಲಾ ಪ್ರತಿಭೋತ್ಸವ (ಭಾಷಣ, ಚಿತ್ರಕಲೆ, ಮಿಮಿಕ್ರಿ, ರೂಪಕ,ನೃತ್ಯ,ಸಂಗೀತ ಇತ್ಯಾದಿ) | 04 | 2.50 | ತಲಾ ರೂ.60,000/- ವೆಚ್ಚದಲ್ಲಿ ಜಿಲ್ಲಾ ಮಟ್ಟದಲ್ಲಿ ಮೂರು ಹಾಗೂ ರಾಜ್ಯಮಟ್ಟದಲ್ಲಿ ರೂ 70,000/- ವೆಚ್ಚದೊಳಗೆ ಒಂದು ಸಾಂಸ್ಕೃತಿಕ ಕಲಾ ಪ್ರತಿಭೋತ್ಸವ ನಡೆಸುವುದು. ಇದು ವಿಶೇಷವಾಗಿ ಕೊಂಕಣಿ ಸಂಸ್ಕೃತಿಯನ್ನು ಶಾಲಾ ಶಿಕ್ಷಣದೊಳಗೆ ಸ್ಥಾಪಿಸುವ ಉದ್ದೇಶ ಹೊಂದಿದೆ. |
| 9 | ಕೊಂಕಣಿ ಭಾಷೆ ಮತ್ತು ಸಂಶೋಧನೆಗಾಗಿ ಅಕಾಡೆಮಿಕ್ ಕೌನ್ಸಿಲ್ ಸ್ಥಾಪಿಸಿ ನಿರ್ವಹಿಸುವುದು | 05 | 0.50 | ಕನಿಷ್ಟ 12 ಭಾಷಾ ತಜ್ಞರಿರುವ ಸಮಿತಿ ರಚಿಸಿ 4 ಸಭೆ ನಡೆಸುವುದು. ಹಾಗೂ ಇನ್ನು ಮುಂದೆ ಕೊಂಕಣಿ ಭಾಷೆಯ, ಭಾಷಾ ಶಾಸ್ತ್ರ, ವ್ಯಾಕರಣ, ಶಾಲಾ ಶಿಕ್ಷಣ, ಶಿಕ್ಷಕ-ಶಿಕ್ಷಣ, ಉನ್ನತ ಶಿಕ್ಷಣ, ಸಂಶೊಧನೆ, ಶಬ್ಧಕೋಶ, ಪದಕೋಶ, ಶಿಕ್ಷಣ ಕೈಪಿಡಿ ರಚನೆ ಇತ್ಯಾದಿ ವಿದ್ವತ್ ಪೂರ್ಣ ವಿಚಾರಗಳನ್ನು ಈ ಸಮಿತಿಯು ಪರಿಶೀಲಿಸಿ , ಅಕಾಡೆಮಿಗೆ ಈ ಕ್ಷೇತ್ರದಲ್ಲಿ ಸೂಕ್ತ ಸಲಹೆಯನ್ನು ನೀಡುತ್ತದೆ. |
| 10 | ಶಾಲಾ ಶಿಕ್ಷಕರಿಗೆ ಕೊಂಕಣಿ ಭಾಷಾ ಬೋಧನಾ ತರಬೇತಿ ಕಾರ್ಯಕ್ರಮ | 04 | 1.00 | ಒಟ್ಟು 100 ಶಿಕ್ಷಕರಿಗಾಗಿ ನಾಲ್ಕು ವಿವಿಧ ಕೇಂದ್ರಗಳಲ್ಲಿ ಕೊಂಕಣಿ ತೃತೀಯ ಭಾಷಾ ಬೋಧನೆಯ ಬಗ್ಗೆ ತಜ್ಞರಿಂದ ಎರಡು ದಿನಗಳ ತರಬೇತಿ – ಶಿಕ್ಷಕರ ಊಟ ವಸತಿ ವೆಚ್ಚ ಸೇರಿರುತ್ತದೆ. ಈ ಬಗ್ಗೆ ಸ್ಥಳೀಯ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಯೋಜಕತ್ವ ಪಡೆಯಲಾಗುವುದು. |
| 11 | ಕೊಂಕಣಿ ಶಿಕ್ಷಕ-ಶಿಕ್ಷಣ :ಡಿ.ಎಡ್, ಬಿ.ಎಡ್ ಸಿಲೆಬಸ್ ಅಭಿವೃದ್ಧಿ ಯೋಜನೆ | 05 | 2.00 | ಕಾರ್ಯಾಗಾರ,ಕಮ್ಮಟ,ಸಂಪನ್ಮೂಲ ಕೈಪಿಡಿ ರಚನೆ, ಪ್ರಕಟಣೆ: ಭಾಷಾ ಶಿಕ್ಷಣ ತಜ್ಞರ ಸಮಿತಿ ರಚಿಸಿ, (ಕೊಂಕಣಿ, ಕನ್ನಡ, ಇಂಗ್ಲಿಷ್ ಇತ್ಯಾದಿ) ಇತರ ಭಾಷಾ ಬೋಧನಾ ವಿಧಾನದ ರೀತಿಯಲ್ಲಿ ಒಂದು ಉಪಯುಕ್ತ ತಾತ್ವಿಕ ಹಾಗೂ ಪ್ರಾಯೋಗಿಕ ಸಂಪನ್ಮೂಲ ಕೈಪಿಡಿ “ಕೊಂಕಣಿ ಸಂಪದ” ಅಭಿವೃದ್ಧಿಪಡಿಸುವುದು. |
| 12 | ಕೊಂಕಣಿ ಭಾಷೆಯಲ್ಲಿ ವಿಜ್ಞಾನ ಪದಕೋಶ(ಪ್ರಾಥಮಿಕ/ಪ್ರೌಢ ಹಂತ) ರಚನೆ | 04 | 2.00 | ಕಾರ್ಯಾಗಾರ,ಕಮ್ಮಟ,ಸಂಶೋಧನೆ ಪ್ರಕಟಣೆ: ಕೊಂಕಣಿ ಭಾಷೆಯಲ್ಲಿ ಶಾಲಾ ಪಠ್ಯ ವಿಷಯಗಳನ್ನು ಓದಲು ಬರೆಯಲು ಅನುಕೂಲವಾಗುವಂತೆ ಪ್ರಾಥಮಿಕ-ಪ್ರೌಢ ಶಾಲಾ ಹಂತದ ವಿಜ್ಞಾನಕ್ಕೆ ಸಂಬಂಧಿಸಿ ಹೊಸ ಪ್ರಮಾಣೀಕೃತ ಪದಕೋಶ ರಚನೆ |
| 13 | ಶಾಲಾ ಕಾಲೇಜು ಸಂಸ್ಥೆಗಳಲ್ಲಿ ಕೊಂಕಣಿ ಔಪಚಾರಿಕ ಶಿಕ್ಷಣ ಕೇಂದ್ರ | 04 | 1.00 | ಒಂದು ತಿಂಗಳ ಅವಧಿಯ ನಾಲ್ಕು ಕೊಂಕಣಿ ಸರ್ಟಿಫಿಕೇಟ್ ಕೋರ್ಸ್‌ನ್ನು ನಾಲ್ಕು ಪ್ರದೇಶಗಳಲ್ಲಿ ನಡೆಸುವುದು. |
| 14 | ಪದವಿಪೂರ್ವ ಕಾಲೇಜು ಹಾಗೂ ವಿಶ್ವ ವಿದ್ಯಾಲಯ ಮಟ್ಟಕ್ಕೆ ಕೊಂಕಣಿ ಭಾಷಾ ಶಿಕ್ಷಣದ ಅಳವಡಿಕೆಗಾಗಿ ಸಮಗ್ರ ಚಿಂತನೆ ನಡೆಸುವ ಕಾರ್ಯಾಗಾರ | 01 | 0.50 | ಸದ್ಯ ಕೊಂಕಣಿಯನ್ನು ಪ್ರಾಥಮಿಕ, ಪ್ರೌಢ ಹಂತದಲ್ಲಿ ಬೋಧಿಸಲಾಗುತ್ತಿದ್ದು, ಮುಂದೆ ಪದವಿಪೂರ್ವ ಹಾಗೂ ಪದವಿ, ವಿಶ್ವವಿದ್ಯಾಲಯ ಹಂತಕ್ಕೆ ವಿಸ್ತರಿಸಲು ಅಗತ್ಯವುಳ್ಳ ಪಠ್ಯಕ್ರಮ, ಚೌಕಟ್ಟು, ಪಠ್ಯ ವಿಷಯ, ಸಂಪನ್ಮೂಲ ಸಾಹಿತ್ಯಗಳನ್ನು ಸಿದ್ಧಪಡಿಸಲು ತಜ್ಞರ ಕಾರ್ಯಾಗಾರ, ಸಂವಾದ ಸೆಮಿನಾರ್, |

| | | | | |
|---|---|---|---|---|
| | | | | ಆಯೋಜಿಸುವುದು. |
| 15 | ಕೊಂಕಣಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ ಕಲಿಕಾ ಉಪಕರಣಗಳ ವಿತರಣೆ | 800 | 1.00 | ತಲಾ ರೂ 125 ಮೀರದಂತೆ 800 ವಿದ್ಯಾರ್ಥಿಗಳಿಗೆ: ಶಾಲೆಯಲ್ಲಿ ಕೊಂಕಣಿ ಕಲಿಕೆಗೆ ವಿದ್ಯಾರ್ಥಿ/ ಪೋಷಕರಲ್ಲಿ ಸದ್ಯ ಕ್ಷೀಣ ಪ್ರತಿಕ್ರಿಯೆ ಇದ್ದು ಇನ್ನೂ ಹೆಚ್ಚು ಉತ್ಸಾಹ, ಅಭಿರುಚಿ ಉಂಟುಮಾಡಲು ಕೊಂಕಣಿ ಭಾಷೆ ಆಯ್ಕೆ ಮಾಡಿರುವ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕವಾಗಿ ಸರಳ ಕಲಿಕಾ ಉಪಕರಣ (ಪೆನ್, ಪೆನ್ಸಿಲ್, ಪುಸ್ತಕ ) ಇತ್ಯಾದಿ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ವಿತರಿಸುವುದು. |
| 16 | ಶಿಕ್ಷಕ –ವಿದ್ಯಾರ್ಥಿ–ಪೋಷಕರು–ಅಕಾಡೆಮಿ ತಂಡಗಳ ಶಾಲಾ ಮಟ್ಟದ ಕೊಂಕಣಿ ಜಾಗೃತಿ ಸಮ್ಮೇಳನ | 20 | 1.00 | ಶಾಲೆಗಳನ್ನು ಕೇಂದ್ರವಾಗಿರಿಸಿ "ನಮ್ಮ ಕೊಂಕಣಿ ನಿಮ್ಮ ಅಕಾಡೆಮಿ" ಕೊಂಕಣಿಗೆ ಪ್ರೋತ್ಸಾಹ ನೀಡುವ ಕಾರ್ಯಕ್ರಮಗಳು, ಕೊಂಕಣಿ ಮಹಾತ್ಮರ ದಿನಾಚರಣೆ ಕಾರ್ಯಕ್ರಮಗಳನ್ನು 20 ಕೇಂದ್ರಗಳಲ್ಲಿ ನಡೆಸುವುದು. |

## (3) ಕೊಂಕಣಿ ಭಾಷಾ ಸಾಹಿತ್ಯ ಅಭಿವೃದ್ಧಿ (8 ಲಕ್ಷ)

| | | | | |
|---|---|---|---|---|
| 17 | ಕನ್ನಡ, ಮಳಯಾಳಂ,ತೆಲುಗು,ತುಳು,ತಮಿಳು,ಹಿಂದಿ,ಮರಾಠಿ ಭಾಷೆಯಲ್ಲಿರುವ ಉಪಯುಕ್ತ ಕಿರು ಕೃತಿಗಳನ್ನು ಕೊಂಕಣಿಗೆ ಭಾಷಾಂತರ(5ಕೃತಿಗಳು)<br>ಮಳಯಾಳಂ, ರೋಮನ್, ದೇವನಾಗರಿ ಉರ್ದು ಅರೇಬಿಕ್ ಲಿಪಿಯಲ್ಲಿರುವ ಕಿರುಕೃತಿಗಳನ್ನು ಕೊಂಕಣಿಯಲ್ಲಿ ಕನ್ನಡಕ್ಕೆ ಲಿ ಪ್ಯಾಂತರಗೊಳಿಸಿ ಪ್ರಕಟಿಸುವುದು.(5ಕೃತಿಗಳು) | 10 | 2.50 | ಕನ್ನಡ ಲಿಪಿಯ ಕೊಂಕಣಿ ಸಾಹಿತ್ಯ ಸಂಗ್ರಹವನ್ನು ಬಲಪಡಿಸಲು ತಲಾ 25000/– ಮಿತಿಯೊಳಗೆ ಒಟ್ಟು 10 ಕೃತಿಗಳನ್ನು ( ಇವುಗಳಲ್ಲಿ 5ಕೃತಿಗಳು ಭಾಷಾಂತರ ಹಾಗೂ 5 ಕೃತಿಗಳು ಲಿಪ್ಯಾಂತರ) ಸಂಪಾದಿಸಿ ಮುದ್ರಿಸುವುದು. |
| 18 | ಕೊಂಕಣಿ ಅಕಾಡೆಮಿ ವತಿಯಿಂದ ಶಿಕ್ಷಣ ಸಂಸ್ಥೆಗಳಲ್ಲಿ ಪುಸ್ತಕ ಭಂಡಾರ, ವಾಚನಾಲಯಗಳಲ್ಲಿ ಕೊಂಕಣಿ ವಿಭಾಗ ಸ್ಥಾಪಿಸುವುದು | 50 | 2.50 | ಕೊಂಕಣಿ ಶಿಕ್ಷಣ ನೀಡುವ ಶಾಲೆಗಳಲ್ಲಿ ಕೊಂಕಣಿ ಸಾಮಾನ್ಯ ಓದು ಸೌಲಭ್ಯ ನಿರ್ಮಿಸಲು 50 ಪ್ರಾಥಮಿಕ /ಪ್ರೌಢ ಶಾಲೆಗಳಲ್ಲಿ ಕೊಂಕಣಿ ವಿಭಾಗದ ವಾಚನಾಲಯ ಸೌಲಭ್ಯ(ಉಚಿತ ಪುಸ್ತಕ ಹಾಗೂ ಸಣ್ಣ ಕಪಾಟು) ನೀಡುವುದು. ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ನಡೆಸಲಾಗುವುದು. |
| 19 | ಸಿರಿಸಂಪದ ಅಕಾಡೆಮಿ ಸಂಚಿಕೆ ಪ್ರಕಟಣೆ | 04 | 0.40 | ಅಕಾಡೆಮಿಯ ತ್ರೈಮಾಸಿಕ ವರದಿ ಸಿದ್ದಪಡಿಸಿ ಪ್ರಕಟಿಸುವುದು |
| 20 | ಪುಸ್ತಕ ಖರೀದಿ ಮತ್ತು ಮಾಹಿತಿ ಕೇಂದ್ರ ನಿರ್ವಹಣೆ | 100 | 02.00 | ಕೊಂಕಣಿ ಬರಹಗಾರರನ್ನು ಹಾಗೂ ಕಲಾಗಾರರನ್ನು ಪ್ರೋತ್ಸಾಹಿಸಲು ಪ್ರತಿ ಹೊಸ ಸಾಹಿತ್ಯ ಹಾಗೂ ಸಿ.ಡಿ ಗಳನ್ನು ರೂ 2000/– ಮಿತಿಯೊಳಗೆ ಖರೀದಿಸುವುದು. |
| 21 | ಮೂರು ವರ್ಷದ ಅವಲೋಕನಾ ಪುಸ್ತಕ | 01 | 00.10 | ಕನ್ನಡ ಸಂಸ್ಕೃತಿ ಇಲಾಖೆಯ "ಪುನರಾವಲೋಕನ" ಕೃತಿ ರಚಿಸಿ ಮುದ್ರಿಸುವುದು. |
| 22 | ಕೊಂಕಣಿ ವೆಬ್ ಸೈಟ್ ಅಭಿವೃದ್ಧಿಪಡಿಸುವುದು | 01 | 00.50 | ಕನ್ನಡ ಸಂಸ್ಕೃತಿ ಇಲಾಖೆಯಲ್ಲಿ ಬರುವ ಎಲ್ಲಾ ಅಕಾಡೆಮಿಗಳು ಸ್ವಂತ ವೆಬ್‌ಸೈಟ್ ಹೊಂದಬೇಕೆಂಬ ಸೂಚನೆಯ ಮೇರೆಗೆ ಕೊಂಕಣಿ ಸಾಹಿತ್ಯ ಅಕಾಡೆಮಿಗೆ ಸ್ವಂತ ವೆಬ್‌ಸೈಟ್ ನಿರ್ಮಿಸುವ ಯೋಜನೆ. |

## (4)ಕೊಂಕಣಿ ನಾಟಕ ,ಚಲನಚಿತ್ರ,ರಂಗಕಲೆ ಪ್ರಸರಣ (7 ಲಕ್ಷ)

| | | | | |
|---|---|---|---|---|
| 23 | ಕೊಂಕಣಿ ನಾಟಕ ಪ್ರದರ್ಶನ, ಕಮ್ಮಟ,ರಂಗಕಲಾವಿದರೊಂದಿಗೆ ಸಂವಾದ | 04 | 02.00 | ರಾಜ್ಯದ ನಾಲ್ಕು ಪ್ರದೇಶಗಳನ್ನು ಆವರಿಸುವಂತೆ ನಾಲ್ಕು ಕಾರ್ಯಕ್ರಮಗಳನ್ನು ತಲಾ 50,000/– ವೆಚ್ಚ ಮಿತಿಯೊಳಗೆ ರಂಗಕಲೆಯ ಬಗ್ಗೆ ಸಂವಾದ–ಗೋಷ್ಠಿ ಹಾಗೂ ನಾಟಕ ಪ್ರದರ್ಶನ. |
| 24 | ಶೈಕ್ಷಣಿಕ ಮೌಲ್ಯದ ಸಿ.ಡಿ/ಕಿರುಚಿತ್ರ/ಚಲನಚಿತ್ರ/ನಾಟಕ ಪ್ರದರ್ಶನಗಳ ಪ್ರಾಯೋಜಕತ್ವ: ಶಿಕ್ಷಣ ಸಂಸ್ಥೆಗಳಲ್ಲಿ ಅಥವಾ ಇತರೆ ಸಭೆ ಸಮಾರಂಭಗಳಲ್ಲಿ | 08 | 02.00 | ಕೊಂಕಣಿ ಭಾಷೆಯಲ್ಲಿ ನಿರ್ಮಾಣಗೊಂಡ ಹೊಸ ಕಿರು ಚಿತ್ರ, ಚಲನಚಿತ್ರ,(ಕನಿಷ್ಟ ಒಂದು ಗಂಟೆ) ಅಥವಾ ನಾಟಕವನ್ನು ಸಾರ್ವಜನಿಕ ಸಭೆ/ ಶಾಲಾ ಕಾಲೇಜುಗಳ ಸಮಾರಂಭದಲ್ಲಿ ಪ್ರದರ್ಶಿಸುವ ಪ್ರಾಯೋಜಕತ್ವ. ಒಂದು ಕಾರ್ಯಕ್ರಮಕ್ಕೆ ನೀಡುವ ಮೊತ್ತ ರೂ.25,000/– ಮಿತಿಯೊಳಗಿರಬೇಕು. |
| 25 | ಯುವ ಜನರಿಗೆ,ವಿದ್ಯಾರ್ಥಿಗಳಿಗೆ ಮತ್ತು ಮಹಿಳೆಯರಿಗೆ ರಂಗಕಲೆ ತರಬೇತಿ ಶಿಬಿರ(ಒಂದುವಾರ ಅವಧಿ) ಮತ್ತು ಪ್ರದರ್ಶನ | 03 | 01.50 | ಕನಿಷ್ಠ ಹತ್ತು ದಿನಗಳ ಅವಧಿಯಲ್ಲಿ ಕನಿಷ್ಠ 10 ಮಂದಿ ಶಿಬಿರಾರ್ಥಿಗಳು ಅನುಭವಿ ಕಲಾಗಾರರಿಂದ ತರಬೇತಿ ಪಡೆದು ಶಿಬಿರದ ಕೊನೆಯ ದಿನ ಯಶಸ್ವಿ ಪ್ರದರ್ಶನ ನೀಡಬೇಕು. ಒಂದು ಶಿಬಿರಕ್ಕೆ ಗರಿಷ್ಟ |

| | | | | |
|---|---|---|---|---|
| | | | | 50,000/– ಪ್ರಾಯೋಜಕತ್ವ ನೀಡಬಹುದು. |
| 26 | ಬಹುಭಾಷಾ ರಂಗಕಲೆಗೋಷ್ಠಿ ಮತ್ತು ಪ್ರದರ್ಶನ | 01 | 01.50 | ಕರಾವಳಿ ಭಾಷಾ ಸಮೃದ್ಧಿಯನ್ನು ಬಿಂಬಿಸುವಂತೆ ಒಂದೇ ವೇದಿಕೆಯಲ್ಲಿ ತುಳು–ಕೊಂಕಣಿ–ಬ್ಯಾರಿ–ಕನ್ನಡ ರಂಗಕಲೆಗೆ ಸಂಬಂಧಿಸಿದ ಗೋಷ್ಠಿ ಹಾಗೂ ಭಾಷಾ ವೈವಿಧ್ಯತೆ ನಾಟಕ ಪ್ರದರ್ಶನ |

## (5) ಕೊಂಕಣಿ ಸಂಗೀತ ನೃತ್ಯ, ನಾಟ್ಯ ಕಲಾ ಸಂಸ್ಕೃತಿ ಪ್ರಸರಣ(6ಲಕ್ಷ)

| | | | | |
|---|---|---|---|---|
| 27 | ಸಾಹಿತ್ಯ,ಸಂಗೀತ,ನೃತ್ಯ ಕ್ಷೇತ್ರದಲ್ಲಿ ಕಾರ್ಯಾಗಾರ, ಪ್ರಶಂಸೆ ರಸಾಸ್ವಾದನೆ ಶಿಬಿರ | 02 | 1.50 | ಗರಿಷ್ಠ ರೂ 75000/– ಮಿತಿಯೊಳಗೆ ಕೊಂಕಣಿ ಸಾಹಿತ್ಯ/ಸಂಗೀತಕ್ಕೆ ಸಂಬಂಧಿಸಿದಂತೆ ತಲಾ ಒಂದು ಕಾರ್ಯಾಗಾರ/ಶಿಬಿರ. ಈ ಕ್ಷೇತ್ರದಲ್ಲಿ ಇಂದಿನ ಸ್ಥಿತಿ ಹಾಗೂ ಮುಂದಿನ ಬೆಳವಣಿಗೆಗಾಗಿ ಕೈಗೊಳ್ಳಬಹುದಾದ ಕಾರ್ಯಯೋಜನೆಗಳನ್ನು ಚರ್ಚಿಸಬೇಕು. ಸಾಹಿತ್ಯ, ಕಾವ್ಯ, ಸಂಗೀತ, ನೃತ್ಯಗಳ ಪ್ರಶಂಸೆ ರಸಾಸ್ವಾದನೆಯ ಬಗ್ಗೆ ಒತ್ತು ನೀಡಬೇಕು. |
| 28 | ಭಕ್ತಿಗೀತೆ, ದೇಶಭಕ್ತಿಗೀತೆ, ಶಿಶುಕವಿತೆ, ಹನಿಗವನ ಇತ್ಯಾದಿ ಕವನ ಪ್ರಕಾರಗಳ ಕಮ್ಮಟ ರಚನೆ ,ಕವಿಗೋಷ್ಠಿ | 04 | 1.50 | ಭಕ್ತಿಗೀತೆ, ದೇಶಭಕ್ತಿಗೀತೆ, ಶಿಶುಕವಿತೆ, ಹನಿಗವನಗಳ ನಾಲ್ಕು ಬೇರೆ ಬೇರೆ ಕವಿಗೋಷ್ಠಿ ನಡೆಸಿ ಯುವ ಕವಿಗಳಿಗೆ ಪ್ರೋತ್ಸಾಹ ನೀಡುವುದು. |
| 29 | ಹೊರ ರಾಜ್ಯ/ಗಡಿನಾಡು ಪ್ರದೇಶಗಳಲ್ಲಿ ಕೊಂಕಣಿ ಕಲಾ ಸಾಂಸ್ಕೃತಿಕ ಉತ್ಸವ | 03 | 03.00 | ದೆಹಲಿ ನಗರ ಸೇರಿ ಪ್ರಮುಖ ರಾಜ್ಯಗಳಲ್ಲಿ ಒಂದು ಅಥವಾ ಸಾಧ್ಯವಿದ್ದರೆ ಎರಡು ಕಲಾ ಹಾಗೂ ಜಾನಪದ ಉತ್ಸವ ನಡೆಸುವುದು. |

## (6) ಕೊಂಕಣಿ ಜಾನಪದ ಸಾಹಿತ್ಯ, ಕಲೆ, ಸಂಸ್ಕೃತಿ ಪ್ರಸರಣ ( 6 ಲಕ್ಷ)

| | | | | |
|---|---|---|---|---|
| 30 | ಜಾನಪದ ಕಲಾಮೇಳ(ಅ)ಯುವಜನರಿಗಾಗಿ (ಆ)ಮಹಿಳೆಯರಿಗಾಗಿ | 02 | 1.50 | ಯುವ ಜನರಿಗಾಗಿ ಹಾಗೂ ಮಹಿಳೆಯರಿಗಾಗಿ ಕೊಂಕಣಿ ಜಾನಪದ ಕಲಾಪ್ರಕಾರಗಳಲ್ಲಿ ಎರಡು ಮೇಳಗಳನ್ನು ನಡೆಸುವುದು. ತಲಾ ರೂ. 75,000/– ವೆಚ್ಚ ಮಿತಿಯೊಳಗೆ |
| 31 | ಹೊರ ರಾಜ್ಯ/ ಗಡಿನಾಡು ಪ್ರದೇಶಗಳಲ್ಲಿ ಕೊಂಕಣಿ ಜಾನಪದ ಸಂಸ್ಕೃತಿ ಉತ್ಸವ | 01 | 03.00 | ದೆಹಲಿ ನಗರ ಸೇರಿ ಪ್ರಮುಖ ರಾಜ್ಯಗಳಲ್ಲಿ ಒಂದು ಅಥವಾ ಸಾಧ್ಯವಿದ್ದರೆ ಎರಡು ಕಲಾ ಹಾಗೂ ಜಾನಪದ ಉತ್ಸವ ನಡೆಸುವುದು. |
| 32 | ಬಹುಭಾಷಾ ಜಾನಪದ ಕಲಾಮೇಳ | 01 | 1.50 | ಒಂದೇ ವೇದಿಕೆಯಲ್ಲಿ ಕನ್ನಡ–ಕೊಂಕಣಿ–ತುಳು–ಬ್ಯಾರಿ ಭಾಷಾ ಜಾನಪದ ನೃತ್ಯ ಪ್ರದರ್ಶನಗಳನ್ನು ನಡೆಸುವುದು. |